# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ

# ಯೇಸು ಮತ್ತು ಜಕ್ಕಯನು




ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಅಳವಡಿಸುವವರು: Ruth Klassen
Alastair Paterson
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org



BFC
PO Box 3
Winnipeg, MB R3C 2G1
Canada



©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.






ಒಂದು ದಿನ ಯೇಸುವು ಆ ಯೆರಿಕೋ ಊರನ್ನು ದಾಟಿ ಹೋಗುತ್ತಿದ್ದನು. ಆ ಯೆರಿಕೋ ಊರು ಯಹೋಶವನ ಕಾಲದಲ್ಲಿ ನಾಶವಾಗಿತ್ತು. ಆನೇಕ ವರ್ಷಗಳ ನಂತರ ಆ ಊರು ಪುನ: ಸ್ಥಾಪನೆಯಾಗಿ ಅಲ್ಲಿ ಜನರು ವಾಸಮಾಡುವಂತ ಅನಿವಾರ್ಯವಾಯಿತು. ಅಲ್ಲಿ ಜಕ್ಕಯನೆಂಬ ಒಬ್ಬ ಮನುಷ್ಯನಿದ್ದನು.



ಅಲ್ಲಿರುವಂತ ಜನರು ಆತನನ್ನು ಇಷ್ಟ ಪಡುತ್ತಿರಲಿಲ್ಲ ಏಕೆಂದರೆ ಅವನು ಬಹಳ ದಿನಗಳಿಂದ ಅವರಿಂದ ಸುಂಕವನ್ನು ವಸೂಲಿಮಾಡುತ್ತಿದ್ದನು. ಆತನು ಸಲ್ಪ ಹಣವನ್ನು ಸರ್ಕಾರಕ್ಕೆ ಕೊಟ್ಟು ತನಗಾಗಿ ಬಹಳ ಹಣವನ್ನು ಇಟ್ಟುಕೊಂಡಿದ್ದನು.

3

ಸುಂಕ ವಸೂಲಿ ಮಾಡುವ ಕೆಲಸದಿಂದ ಆತನು ಶ್ರೀಮಂತನಾಗಿದ್ದನು ಮತ್ತು ಅವನ ಮನೆಯೂ ಆ ಬಾಗದಲ್ಲಿ ಎಲ್ಲರ ಮನೆಗಿಂತ ಉತ್ತಮವಾಗಿತ್ತು.



4

ಈತನು ಬಹಳ ಕುಳ್ಳನಾಗಿದ್ದನು ಎಲ್ಲರ ಹಾಗೆ ಎತ್ತರವಾಗಿ ಬೆಳೆಯಲಿಲ್ಲ. ಆದರೆ ಹಣದಲ್ಲಿ ಕುಳ್ಳನಗಿರಲಿಲ್ಲ.



5



ಜಕ್ಕಯನು ಯೇಸುವಿನ ಕುರಿತು ತಿಳಿದುಕೊಂಡಿದ್ದನು ಆಗ ಯೇಸುವು ಯೆರಿಕೋದಲ್ಲಿದ್ದನೆಂದು ಜಕ್ಕಯನು ತಿಳಿದು ಆ ನಜರೇತಿನ ಯೇಸುವನ್ನು ನೋಡಲು ಬಯಸಿದನು ಆದರೆ ಆತನು ಕುಳ್ಳವನಾಗಿರುವುದರಿಂದ ಆತನನ್ನು ನೋಡಲಾರದೆ ಹೋದನು.

6



ಜಕ್ಕಯನಿಗೆ ಒಂದು ಆಲೋಚನಯು ಬಂತು, ಯೇಸು ಬರುವ ದಾರಿಯಲ್ಲಿ ಒಂದು ಆಲದ ಮರವಿತ್ತು ಜಕ್ಕಯನು ಯೇಸುವನ್ನು ನೋಡಲು ಆಲದ ಮರವನ್ನು ಹತ್ತಿ ನೋಡುವೆನೆಂದು ಆಲೋಚನೆಯನ್ನು ಮಾಡಿಕೊಂಡನು.

7



ಆತನು ಅಲ್ಲಿರುವ ಆಲದ ಮರವನ್ನು ಹತ್ತಿ ಯೇಸುವನ್ನು ನೋಡುವುದಕ್ಕೆ ಅನುಕೂಲವಾಗುವಂತೆ ಒಂದು ಕೊಂಬೆಯ ಮೇಲೆ ಕೂತುಕೊಂಡು ಆತನು ಬರುವ ದಾರಿಯನ್ನು ಕಾಯುತ್ತಿದ್ದನು.

8

ಆಗ ಯೇಸು ಮೇಲಕ್ಕೆ ನೋಡಿ ಜಕ್ಕಯನೆ ತಟ್ಟನೆ ಕೆಳಗಿಳಿದು ಬಾ ಎಂದನು ಇದನ್ನು ಕೇಳಿದ ಜಕ್ಕಯನಿಗೆ ಆ ಮಾತನ್ನು ನಂಬುವುದಕ್ಕೆ ಆಗಲಿಲ್ಲ.



9



ಯೇಸುವು ಕರೆದಂತ ವಿಷಯವನ್ನು ಜಕ್ಕಯನು ಕೇಳಿದಾಗ ಆತನಿಗೆ ಆರ್ಶ್ಚವಾಗಿರಬಹುದು. ಮತ್ತು ನಾನು ನಿನ್ನ ಮನೆಯಲ್ಲಿ ಊಳುಕೊಳ್ಳಬೇಕೆಂದು ಯೇಸು ತಿಳಿಸಿದಾಗ ಆತನಿಗೆ ಎಲ್ಲಿಲ್ಲದ ಆಶ್ಚರ್ಯವಾಯಿತು. ಈ ಸುದ್ದಿ ಕೇಳಿದ ಜಕ್ಕಯನು ಬಿಳುವಷ್ಟು ಮಟ್ಟಿಗೆ ಮರದಿಂದ ಇಳಿದು ಬಂದನು.

10

ಯೇಸು ಜಕ್ಕಯನ ಮನೆಗೆ ಬಂದದ್ದು ಆತನಿಗೆ ಬಹಳ ಸಂತೋಷವನ್ನುಂಟುಮಾಡಿತು, ಆದರೆ ಯೇಸು ಅಂತ ಪಾಪಿಯ ಮನೆಗೆ ಹೋದನೆಂದು ಬಹಳ ಜನರು ಇಷ್ಟವಾಗದೆ ಗುಣುಗುಟ್ಟರು.



11



ಯೇಸು ಜಕ್ಕಯನ ಜೀವಿತವನ್ನು ಬದಲಾಯಿಸಿದರು, ಆಗ ಜಕ್ಕಯನು ಸ್ವಾಮಿ ನೋಡು, ನನ್ನಲ್ಲಿರುವಂತ ಆಸ್ತಿಯಲ್ಲಿ ಬಡವರಿಗೆ ಅರ್ದಬಾಗವನ್ನು ಕೊಡುತ್ತೆನೆ ಮತ್ತು ನಾನು ಯಾರಿಂದಾದರು ಅನ್ಯಾಯವಾಗಿ ಎಳಕೊಂಡಿದ್ದಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೆನೆ ಅಂದನು.

12

ಯೇಸು ಜಕ್ಕಯನ ಜೀವಿತವನ್ನು ನೋಡಿ ಖುಷಿ ಪಟ್ಟರು, ಹಾಗೆಯೇ ಯಾರಾರು ಅದೇ ರೀತಿಯಾಗಿ ತಿರಿಗಿಕೊಳ್ಳುತ್ತಾರೊ ಆವರನ್ನು ನೋಡಿ ಯೇಸುವು ಖುಷಿಪಡುವರಾಗಿರುತ್ತಾರೆ. ಮನುಷ್ಯ ಕುಮಾರನು ಕೆಟ್ಟು ಹೋದವರನ್ನು ಹುಡುಕಿ ರಕ್ಷಣೆಮಾಡುವುದಕ್ಕೆ ಬಂದನು, ಆ ದಿನ ಯೆರಿಕೋದಲ್ಲಿ ಜಕ್ಕಯನನ್ನು ಕಂಡರು.



13

ಯೇಸು ಮತ್ತು ಜಕ್ಕಯನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಲೂಕ **19**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

14




53

60



ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16